# ಹತ್ತನೇ ತರಗತಿ ಸಮಾಜ ವಿಜ್ಞಾನ ಮಾದರಿ ಪ್ರಶ್ನಾ ಪತ್ರಿಕೆ -9

ಅ. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಡಲಾಗಿದೆ.ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.1*10=10

1.ಪಂಜಾಬಿನ ಸಿಂಹ ಎಂದು ಪ್ರಸಿಧ್ಧನಾಗಿದ್ದವನು__________

A. ರಣಜಿತ್ ಸಿಂಗ್
B. ಗುಲಾಬ್ ಸಿಂಗ್
C. ದುಲೀಪ್ ಸಿಂಗ್
D. ಲಾಲ್ ಸಿಂಗ್

2.ವಿಶಾಲ ಮೈಸೂರು ರಾಜ್ಯ ಕರ್ನಾಟಕವೆಂದು ಮರುನಾಮಕರಣಗೊಂಡ ವರ್ಷ______

A. 1972
B. 1975
C. 1973
D. 1956

3.ಭಾರತ ಮತ್ತು ಪಾಕಿಸ್ತಾನದ ನಡುವೆ ಉತ್ತಮ ಬಾಂದವ್ಯ ಇಲ್ಲ. ಕಾರಣ _______

A. ಪಾಕಿಸ್ತಾನ ಭಾರತದ ನೆರೆಯ ರಾಷ್ಟ್ರವಾಗಿರುವುದರಿಂದ
B. ಪಾಕಿಸ್ತಾನದ ಮಿಲಿಟರಿಶಾಹಿತ್ವ ಮತ್ತು ರಾಜಕೀಯ ಅಸ್ಥಿರತೆ
C. ಅಮೇರಿಕಾವು ಪಾಕಿಸ್ತಾನವನ್ನು ಬೆಂಬಲಿಸುವುದರಿಂದ
D. ಅಕ್ಷಾಯ್ ಚೀನ್ ಪಾಕ್ ವಶದಲ್ಲಿರುವುದರಿಂದ

4.ವಿಶ್ವಸಂಸ್ಥೆಯ ಸಚಿವ ಸಂಪುಟ ಎಂದು ಹೆಸರಾಗಿರುವ ಅಂಗಸಂಸ್ಥೆ ________

A. ಸಾಮಾನ್ಯ ಸಭೆ
B. ಸಚಿವಾಲಯ
C. ಅಂತರಾಷ್ಟ್ರೀಯ ನ್ಯಾಯಾಲಯ
D. ಬದ್ರತಾಸಮಿತಿ

5.ಭಾರತದಲ್ಲಿ ಲಿಂಗಾನುಪಾತ ಕಡಿಮೆ ಇದೆ.ಕಾರಣ

A. ಹೆಣ್ಣು ಭ್ರೂಣ ಮತ್ತು ಹೆಣ್ಣು ಶಿಶು ಹತ್ಯೆ
B. ವರದಕ್ಷಿಣೆ
C. ಅನಕ್ಷರತೆ
D. ಬಡತನ

6.ಬಿಹಾರದ ಕಣ್ಣೀರಿನ ನದಿ______

A. ನರ್ಮದಾ ನದಿ
B. ದಾಮೋದರ ನದಿ
C. ಕೋಸೀ ನದಿ
D. ಮಹಾನದಿ

7.ಗೋಧಿಯ ಕಣಜ ಎಂದು ಕರೆಯಲ್ಪಡುವ ರಾಜ್ಯ_______

A. ಉತ್ತರಪ್ರದೇಶ
B. ಪಂಜಾಬ್
C. ಪಶ್ಚಿಮ ಬಂಗಾಳ
D. ಬಿಹಾರ

8.ಈ ಕೆಳಗಿನವುಗಳಲ್ಲಿ ಅಭಿವೃದ್ದಿ ಹೊಂದಿದ ರಾಷ್ಟ್ರದ ಲಕ್ಷಣವಲ್ಲದ ಅಂಶ ________

A. ರಾಷ್ಟ್ರೀಯ ಆದಾಯ ಹೆಚ್ಚಿರುತ್ತದೆ.
B. ಕೈಗಾರಿಕಾ ಮತ್ತು ಸೇವಾ ವಲಯದ ಅಭಿವೃಧ್ಧಿ
C. ಮುಂದುವರಿದ ವಿಜ್ಞಾನ ತಂತ್ರಜ್ಞಾನ
D. ಮೂಲಭೂತ ಅವಶ್ಯಕತೆಗಳ ಕೊರತೆ

9.ಬ್ಯಾಂಕಿನಲ್ಲಿ ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದಾದ ಖಾತೆ_______

A. ಉಳಿತಾಯ ಖಾತೆ
B. ಆವರ್ತ ಖಾತೆ
C. ಚಾಲ್ತಿ ಖಾತೆ
D. ನಿಶ್ಚಿತ ಠೇವಣಿ ಖಾತೆ

10.ಬಿಳಿ ಕ್ರಾಂತಿಯ ಪಿತಾಮಹ ಎಂದೆನಿಸಿಕೊಂಡವರು ________

A. ಧೀರುಭಾಯಿ ಅಂಬಾನಿ
B. ವರ್ಗೀಸ್ ಕುರಿಯನ್
C. ನರೇಶ್ ಗೋಯೆಲ್
D. ಪ್ರತಾಪ್ ರೆಡ್ಡಿ

ಆ. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.1*14=14

1. ನೀವು ಮೌಖಿಕ ಚರಿತ್ರೆಯ ನಿರೂಪಕರಾದರೆ ಅಭ್ಯಸಿಸುವ ಆಕರಗಳಾವುವು?
2. ಸರದಾರ್ ವಲ್ಲಭಾ ಭಾಯಿ ಪಟೇಲ್ ರನ್ನು ಭಾರತದ ಐಕ್ಕಿನ ಮನುಷ್ಯ ಎಂದು ಕರೆಯಲು ಕಾರಣವೇನು?
3. ಜಪಾನ್ ಪರ್ಲ್ ಹಾರ್ಬರ್ ಮೇಲೆ ದಾಳಿ ನಡೆಸಿದ್ದರಿಂದ ಆದ ಪರಿಣಾಮವೇನು?
4. ಕಾವೇರಿ ವಿವಾದವು ಯಾವೆರಡು ರಾಜ್ಯಗಳ ನಡುವೆ ಪ್ರಾದೇಶಿಕವಾದಕ್ಕೆ ಕಾರಣವಾಗಿದೆ?
5. ಯುನಿಸೆಫ್ ಸಂಸ್ಥೆ ಮಾನವೀಯ ದೃಷ್ಟಿಕೋನ ಹೊಂದಿದ ಸಂಸ್ಥೆ . ಸಮರ್ಥಿಸಿರಿ.
6. ಪೂರ್ವಾಗ್ರಹ ಎಂದರೇನು?
7. ಬಾಲಕಾರ್ಮಿಕ ಪಧ್ಧತಿ ಶಿಕ್ಷಣ ಹಕ್ಕು ಕಾಯ್ದೆ 2009 ಕ್ಕೆ ವಿರುಧ್ಧವಾಗಿದೆ ಏಕೆ?
8. ಭಾರತದ ವ್ಯವಸಾಯವು ಮಾನ್ಸೂನ್ ಜೊತೆ ಆಡುವ ಜೂಜಾಟವಾಗಿದೆ ಹೇಗೆ?
9. ಮಿಶ್ರ ಬೇಸಾಯ ಎಂದರೇನು?
10. ಪೆಟ್ರೋಲಿಯಂ ದ್ರವ ರೂಪದ ಚಿನ್ನ ಹೇಗೆ?
11. ಜೈವಿಕ ತಂತ್ರಜ್ಞಾನದಿಂದ ಕೃಷೀ ಕ್ಷೇತ್ರದ ಮೇಲಾದ ಪರಿಣಾಮವೇನು?
12. ತಲಾ ಆದಾಯವು ಅಭಿವೃಧ್ಧಿಯ ನೈಜ್ಯ ಮಾಪಕವಾಗಲಾರದು ಏಕೆ?
13. ಆಯವ್ಯಯದ ಅರ್ಥ ತಿಳಿಸಿ.
14. ಜಿಲ್ಲಾ ಕೈಗಾರಿಕಾ ಕೇಂದ್ರವನ್ನು ಯಾವಾಗ ಸ್ಥಾಪಿಸಲಾಯಿತು?

ಇ. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯದಲ್ಲಿ ಉತ್ತರಿಸಿರಿ.2*15=30

1. ದ್ವಿಸರ್ಕಾರ ಪಧ್ಧತಿಯು ದೇಶೀಯ ಪ್ರದೇಶಗಳ ಮೇಲೆ ಭದ್ರ ಹಿಡಿತವನ್ನು ಸಾಧಿಸಲು ಬ್ರಿಟೀಷರಿಗೆ ಸಹಕಾರಿಯಾಯಿತು.ಸಮರ್ಥಿಸಿರಿ.
2. ಹೈದರಾಬಾದ್ ಕರ್ನಾಟಕದ ಪ್ರದೇಶಗಳಾವುವು?
3. ಸ್ವಾಮೀ ವಿವೇಕಾನಂದರು ಯುವ ಶಕ್ತಿಯ ಪ್ರೇರಕರಾಗಿದ್ದರು. ಹೇಗೆ?

ಅಥವಾ

ರೈತವಾರಿ ಪಧ್ಧತಿಯ 2 ಲಕ್ಷಣ ಬರೆಯಿರಿ.

4. ರಷ್ಯಾದಲ್ಲಿ ಸ್ಟಾಲಿನ್ ಕೈಗೊಂಡ ಕ್ರಮಗಳೇನು?
5. ಭ್ರಷ್ಟಾಚಾರ ಎಂದರೇನು?ಇದನ್ನು ತಡೆಗಟ್ಟಲು ಸರ್ಕಾರ ಸ್ಥಾಪಿಸಿರುವ ಸಂಸ್ಥೆ ಯಾವುದು?
6. ಮಾನವ ಹಕ್ಕುಗಳ ಹೋರಾಟಕ್ಕೆ ಪುಷ್ಟಿ ತಂದು ಕೊಟ್ಟ ಘಟನೆಗಳು ಯಾವುವು?
7. ಮಹಿಳಾ ಸ್ವಸಹಾಯ ಸಮೂಹಗಳ ಪ್ರಮುಖ್ಯತೆಯನ್ನು ತಿಳಿಸಿ.
8. ಪೂರ್ವ ಕರಾವಳಿ ಮತ್ತು ಪಶ್ಚಿಮ ಕರಾವಳಿಯ ನಡುವಿನ ವ್ಯತ್ಯಾಸ ತಿಳಿಸಿ.
9. ಮಣ್ಣಿನ ಸವೆತಕ್ಕೆ ಕಾರಣವೇನು?
10. ಮ್ಯಾಂಗ್ರೂವ್ ಕಾಡುಗಳ ಲಕ್ಷಣವೇನು?
11. ಜಿ.ಐ.ಎಸ್ ನಿಂದ ಭಾರತಕ್ಕೆ ಪ್ರಯೋಜನವಿದೆ .ವಿಮರ್ಶಿಸಿರಿ
12. ಚಂಡಮಾರುತದ ಮುನ್ನೆಚ್ಚರಿಕಾ ಕ್ರಮಗಳನ್ನು ತಿಳಿಸಿ.
13. ಮಹಿಳಾ ಸಬಲೀಕರಣಕ್ಕೆ ನಿಮ್ಮ ಸಲಹೆ ಏನು?
14. ಜೀವ ವಿಮೆಯ ಪ್ರಾಮುಖ್ಯತೆ ಏನು?
15. ಜಾಗತೀಕರಣ ಬಡ ದೇಶಗಳ ಅಭಿವೃಧ್ಧಿಗೆ ಮಾರಕ.ಚರ್ಚಿಸಿ.

ಈ. ಕೆಳಗಿನ ಪ್ರಶ್ನೆಗಳಿಗೆ ಆರು ಎಂಟು ವಾಕ್ಯದಲ್ಲಿ ಉತ್ತರಿಸಿರಿ.3*6=18

1. ಭಾರತದ ಪ್ರಥಮ ಸ್ವಾತಂತ್ರ್ಯಾ ಸಂಗ್ರಾಮ ವಿಫಲವಾಗಿದೆ.ಈ ಹೇಳಿಕೆಯನ್ನು ಸಮರ್ಥಿಸಿ.

ಅಥವಾ

ಭಾರತೀಯರಲ್ಲಿ ರಾಷ್ಟ್ರೀಯ ಜಾಗೃತಿಯನ್ನು ಮೂಡಿಸಲು ಪತ್ರಿಕೋದ್ಯಮದ ಪಾತ್ರವೇನು?

2.ಭಾರತದ ವಿದೇಶಾಂಗ ನೀತಿಯ ಉದ್ದೇಶಗಳೇನು?

ಅಥವಾ

ರಷ್ಯಾದೊಂದಿಗೆ ಭಾರತದ ಸಂಬಂಧ ವಿವರಿಸಿ.

3.ಅಸ್ಪೃಶ್ಯತೆಯ ನಿವಾರಣೆ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳೇನು?

ಅಥವಾ

ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸವೇನು?

4.ರಸ್ತೆ ಸಾರಿಗೆಯಲ್ಲಿ ಕಂಡುಬರುವ ತೊಡಕುಗಳೇನು?

ಅಥವಾ

ಭಾರತದ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯ ಬೆಳವಣಿಗೆಯನ್ನು ವಿವರಿಸಿ.

5.ಗ್ರಾಮೀಣಾಭಿವೃಧ್ಧಿಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಗಳ ಪಾತ್ರವೇನು?

ಅಥವಾ

ಕೇಂದ್ರ ಸರ್ಕಾರದ ತೆರಿಗೆಯೇತರ ಆದಾಯಗಳಾವುವು?

6.ಬ್ಯಾಂಕ್ ನಿರ್ವಹಿಸುವ ಕಾರ್ಯಗಳನ್ನು ತಿಳಿಸಿ.

ಅಥವಾ

ವಿಮಾ ಸಂಸ್ಥೆಯ ಅನುಕೂಲಗಳಾವುವು?

ಉ. ಈ ಕೆಳಗಿನ ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯದಲ್ಲಿ ಉತ್ತರಿಸಿರಿ. 1*4=4

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುಬಾಶ್ ಚಂದ್ರ ಬೋಸ್ ರವರ ಸಾಧನೆಗಳನ್ನು ವಿವರಿಸಿ.

ಅಥವಾ

ಭಾರತ ಸ್ವಾತಂತ್ರ್ಯ ಗಳಿಸಿದ ಸಂದರ್ಬದಲ್ಲಿ ಎದುರಿಸಿದ ಸಮಸ್ಯೆಗಳು ಯಾವುವು?

ಊ. ಭಾರತದ ನಕ್ಷೆಯನ್ನು ಬರೆದು ಇವುಗಳನ್ನು ಗುರುತಿಸಿ. 1*4=4

A. 82 1/2* ಪೂ.ರೇಖಾಂಶ
B. ಭಾಕ್ರಾನಂಗಲ್
C. ಕೈಗಾ

*************************************************************************************************************

ಪ್ರಶ್ನಾ ಪತ್ರಿಕೆಯನ್ನು ರಚಿಸಿದ ಶಿಕ್ಷಕರ ಹೆಸರುಗಳು :

I. ಪ್ರವೀಣ, ಸೂರ್ಯ
II. ಪವಿತ್ರ
III. ರೂಪಾ.ಡಿ.ಎನ್
IV. ಲೀಲಾ.ಡಿ.ನಾಯಕ್
V. ವೆರೋನಿಕಾ ಡಿ ಸೋಜ
VI. ವತ್ಸಲಾ
VII. ಶಿವರಾಮ್ ಆಚಾರ್ಯ
VIII. ಆಶಲತಾ
IX. ಮಿಯ್ಯಾಗೆ
X. ಪುರುಷೋತ್ತಮ